ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/10613/2019/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:06-09-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: 1) ರವೀಂದ್ರ ಬೈಕೊಡ್, ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ, ಔರಾದ್, ಜೇವರ್ಗಿ ತಾಲ್ಲೂಕು, ಕಲಬರುಗಿ ಜಿಲ್ಲೆ 2) ಸುರೇಶ್, ಪ್ರಭಾರ ಎಇಇ, ಕೆ.ಬಿ.ಜೆ.ಎನ್.ಎನ್., ಕಾಡಾ ಹೊರಗಾಲುವೆ ಉಪವಿಭಾಗ, ನಂ.2, ಚಿಗರಹಳ್ಳಿ ಕ್ಯಾಂಪ್, ಜೇವರ್ಗಿ ತಾಲ್ಲೂಕು, ಕಲಬರುಗಿ ಜಿಲ್ಲೆ ಮತ್ತು 3) ಜಗನ್ನಾಥ ಜ್ಯೋರ್ತಿಲಿಂಗ, ಹಿಂದಿನ ಪ್ರಭಾರ ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ-1, ಔರಾದ್, ಜೇವರ್ಗಿ ತಾಲ್ಲೂಕು, ಕಲಬುರಗಿ ಇವರ (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಶ್ರವಣಕುಮಾರ್ ಡಿ ನಾಯಕ್, ಜೈ ಸಂತೋಷಿಮಾ ಕಾಂಪ್ಲೇಕ್ಸ್, 3ನೇ ಮಹಡಿ, ಎನ್.ಜಿ.ಓ. ಕಾಲೋನಿ, ಹೊಸ ಜೇವರ್ಗಿ ರಸ್ತೆ, ಕಲಬುರಗಿ ಇವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು 1) ರವೀಂದ್ರ ಬೈಕೊಡ್, ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ, ಔರಾದ್, ಜೇವರ್ಗಿ ತಾಲ್ಲೂಕು, ಕಲಬರುಗಿ ಜಿಲ್ಲೆ 2) ಸುರೇಶ್, ಪ್ರಭಾರ ಎಇಇ, ಕೆ.ಬಿ.ಜೆ.ಎನ್.ಎನ್., ಕಾಡಾ ಹೊರಗಾಲುವೆ ಉಪವಿಭಾಗ, ನಂ.2, ಚಿಗರಹಳ್ಳಿ ಕ್ಯಾಂಪ್, ಜೇವರ್ಗಿ ತಾಲ್ಲೂಕು, ಕಲಬರುಗಿ ಜಿಲ್ಲೆ ಮತ್ತು 3) ಜಗನ್ನಾಥ ಜ್ಯೋರ್ತಿಲಿಂಗ, ಹಿಂದಿನ ಪ್ರಭಾರ ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ-1, ಔರಾದ್, ಜೇವರ್ಗಿ ತಾಲ್ಲೂಕು, ಕಲಬುರಗಿ ಇವರ (ಇನ್ನು ಮುಂದೆ ಅನುಕ್ರಮವಾಗಿ "ಎದುರುದಾರರು-1, 2, ಮತ್ತು 3" ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ಸದರಿ ದೂರಿನಲ್ಲಿ ಹೈಟೆಕ್ ಟಾರ್ ರಸ್ತೆಯ ಕಾಮಗಾರಿಯನ್ನು ಕಲಬುರಗಿಯ ಜೇವರ್ಗಿ ತಾಲ್ಲೂಕಿನ ಕೊಡಚಿ ಗ್ರಾಮ ದಿಂದ ಖಾದ್ಯಾಪುರ ಗ್ರಾಮದಲ್ಲಿ ಕೈಗೊಂಡಿದ್ದು ಸದರಿ ಕಾಮಗಾರಿಯು ಅಂದಾಜು ಪಟ್ಟಿಯಂತೆ ಮತ್ತು ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಐಟಂಗಳಂತೆ ನಡೆಯುತ್ತಿಲ್ಲವೆಂದು ಇವುಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು ಸದರಿ

ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು ಹಾಗೂ ಗುತ್ತಿಗೆದಾರರಿಗೆ ಹಣವನ್ನು ನೀಡಬಾರದೆಂದು ವಿನಂತಿಸಿಕೊಂಡಿರುತ್ತಾರೆ.

**3. ಎದುರುದಾರರ ಆಕ್ಷೇಪಣೆ:**

1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದೂರುದಾರರ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಎದುರುದಾರರು [illegible] ರಸ್ತೆ ಕಾಮಗಾರಿಗೆ ರೂ.147-00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಸದರಿ ರಸ್ತೆ ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ಮತ್ತು ಅಂದಾಜು ಪಟ್ಟಿಯಲ್ಲಿನ ಐಟಂಗಳಂತೆ ನಿರ್ವಹಿಸುತ್ತಿರುವುದಾಗಿ, ಡಾಂಬರೀಕರಣ ಮತ್ತು ಇತರೆ ಸಣ್ಣ ಕೆಲಸಗಳು ಬಾಕಿಯಿರುವುದಾಗಿ ತಿಳಿಸಿರುತ್ತಾರೆ. ಗುತ್ತಿಗೆದಾರರಿಗೆ ರೂ.91.23 ಲಕ್ಷಗಳನ್ನು ಪಾವತಿಸುವುದು ಬಾಕಿಯಿರುವುದಾಗಿ ತಿಳಿಸಿರುತ್ತಾರೆ. ಗುಣಭರವಸೆ ನಿಯಂತ್ರಣಾಧಿಕಾರಿಗಳಿಂದ ಕಾಲ ಕಾಲಕ್ಕೆ ಪಡೆದುಕೊಂಡ ವರದಿಗಳ ಆಧಾರದ ಮೇಲೆ ಗುತ್ತಿಗೆದಾರರಿಗೆ ಹಿಂದಿನ ಬಿಲ್ಲುಗಳ ಹಣವನ್ನು ಪಾವತಿಸಿರುವುದಾಗಿ ದೂರುದಾರರು ಸುಳ್ಳು ದೂರನ್ನು ನೀಡಿದ್ದು ಸದರಿ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

ದೂರುದಾರರು ಕಳಪೆ ಗುಣಮಟ್ಟ ಮತ್ತು ಅಂದಾಜು ಪಟ್ಟಿಯಂತೆ ಮತ್ತು ಅಂದಾಜು ಪಟ್ಟಿಯಲ್ಲಿನ ಐಟಂಗಳ ಪ್ರಕಾರ ರಸ್ತೆ ಕಾಮಗಾರಿಯನ್ನು ಮಾಡುತ್ತಿಲ್ಲವೆಂದು ಆಪಾದಿಸಿರುವ ಅಂಶಕ್ಕೆ ಸಂಬಂಧಿಸಿದಂತೆ ಗೌರವಾನ್ವಿತರ ಆದೇಶ ಪಡೆದು ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಸದರಿ ಪ್ರಕರಣದ ಕಡತವನ್ನು ಕಳುಹಿಸಿ ರಸ್ತೆಯ ಗುಣಮಟ್ಟದ ಬಗ್ಗೆ ವರದಿಯನ್ನು ಪಡೆದುಕೊಳ್ಳುವ ಸಲುವಾಗಿ ಕಳುಹಿಸಿಕೊಡಲಾಗಿರುತ್ತದೆ.

ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು-5 ಆದ ಶ್ರೀ ಆರ್.ರವಿಶಂಕರ್ ಇವರು ಸದರಿ ಪ್ರಕರಣದ ತನಿಖಾಧಿಕಾರಿಯಾಗಿರುತ್ತಾರೆ. ತನಿಖಾಧಿಕಾರಿಯವರು ದಿನಾಂಕ;12-11-2020ರಂದು ಸ್ಥಳ ತನಿಖೆಯನ್ನು ದೂರುದಾರರ ಮತ್ತು ಎದುರುದಾರರ ಸಮಕ್ಷಮ ಕೈಗೊಂಡಿರುತ್ತಾರೆ. ತನಿಖಾಧಿಕಾರಿಯವರು ಕೊಡಚಿಯಿಂದ ಖಾದ್ಯಾಪುರದವರೆಗಿನ ಅಚ್ಚುಕಟ್ಟು ರಸ್ತೆಯಲ್ಲಿನ ಕಿ.ಮೀ. 0.00 ರಿಂದ ಕಿ.ಮೀ. 2.90 ರವರೆಗೆ ಅಭಿವೃದ್ಧಿಪಡಿಸಿರುವ ರಸ್ತೆಯ ಕಾಮಗಾರಿಯಲ್ಲಿನ ಗ್ರೇಡ್-2 ಜಲ್ಲಿ ಮತ್ತು ಗ್ರೇಡ್-3 ಜಲ್ಲಿಯನ್ನು ತೂಕ ಮಾಡಿ ನಿಗಧಿತ ತೂಕಕ್ಕಿಂತ 43.51 ಕೆ.ಜಿ. ಕಡಿಮೆ ಜಲ್ಲಿನ್ನು ಸ್ಥಳದಲ್ಲಿ ಹಾಕಿರುತ್ತಾರೆಂದು, ಗ್ರೇಡ್-2 ಮತ್ತು 3 ಜಲ್ಲಿಗೆ ಪಾವತಿಸಿರುವ ಒಟ್ಟು ಹಣದಲ್ಲಿ ರೂ.15,90,777/-ಗಳನ್ನು ಕಡಿತಗೊಳಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧ 50 * 50 ಸೆಂ.ಮೀ. ಅಳತೆಯ ಪಿಟ್‌ಗಳಿಗೆ ಗ್ರೇಡ್-2 ಮತ್ತು ಗ್ರೇಡ್-3 ಜಲ್ಲಿ ಕಲ್ಲುಗಳನ್ನು ಸ್ಥಳದಲ್ಲಿ ತೆಗೆದು ಅವುಗಳ ತೂಕ, ಡಾಂಬರ್ ಪರಿಮಾಣ, ಸಾಮರ್ಥ್ಯ ಇವುಗಳ ಬಗ್ಗೆ ಪರೀಕ್ಷಾ ವರದಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್,

ಗುಣಭರವಸೆ ಉಪವಿಭಾಗ, ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರು ಸಲ್ಲಿಸಿದ್ದು ಸದರಿ ವರದಿಗಳು ಸರಿಯಾಗಿರುತ್ತವೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಮುಂದುವರೆದು, ಕೊಡಚಿಯಿಂದ ಖಾದ್ಯಾಪುರದವರೆಗಿನ ಅಚ್ಚುಕಟ್ಟು ರಸ್ತೆಯಲ್ಲಿನ ಕಿ.ಮೀ. 0.00 ರಿಂದ ಕಿ.ಮೀ. 2.90 ರವರೆಗೆ ಅಭಿವೃದ್ಧಿಪಡಿಸಿರುವ ರಸ್ತೆಯ ಕಾಮಗಾರಿಯಲಿನ ಎಸ್.ಡಿ.ಬಿ.ಯ ದಪ್ಪವನ್ನು ವಿವಿಧ ಚೈನೇಜ್‌ಗಳಲ್ಲಿ ಅಳತೆ ಮಾಡಿದ್ದು ಅಳತೆ ಪುಸ್ತಕ ಮತ್ತು ವಾಸ್ತವಿಕ ಅಳತೆಗಳಿಗೆ ಹಾಳೆ ಮಾಡಿದ್ದು ಸದರಿ ದಪ್ಪವು ತಾಳೆಯಾಗಿರುತ್ತದೆ ಎಂದು ಮತ್ತು ಎಸ್.ಡಿ.ಬಿ.ಸಿ. ರಸ್ತೆಯು ಸುಸ್ಥಿತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. ಅಂತಿಮವಾಗಿ ತನಿಖಾಧಿಕಾರಿಯವರು ಹೆಚ್ಚುವರಿಯಾಗಿ ಪಾವತಿಸಿರುವ ರೂ.15,90,777/–ಗಳಿಗೆ ಶ್ರೀ ರವೀಂದ್ರ ಬ್ಯಾಕೋಡ, ಇಇ, ಇವರು ರೂ.1,98,847/–ಗಳಿಗೆ, ಜಗನ್ನಾಥ್ ಜ್ಯೋತಿರ್ಲಿಂಗ, ಪ್ರಭಾರ ಇಇ, ಇವರು ರೂ.198,847/–ಗಳಿಗೆ, ಸುರೇಶ ಯಾತನೂರ, ಪ್ರಭಾರ ಎಇಇ ಇವರು ರೂ.5,96,541/–ಗಳಿಗೆ ಮತ್ತು ಸುರೇಶ ಯಾತನೂರ, ಎಇ ಇವರು ರಊ.5,96,541/–ಗಳಿಗೆ ಜವಾಬ್ದಾರರಾಗಿದ್ದು ಇವರುಗಳಿಂದ ವಸೂಲಾತಿ ಮಾಡಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿಯ ಆಧಾರದ ಮೇಲೆ ಗೌರವಾನ್ವಿತರ ಆದೇಶ ಪಡೆದು ಶ್ರೀ ಜಗನ್ನಾಥ್ ಜ್ಯೋತಿರ್ಲಿಂಗ, ಹಿಂದಿನ ಕಾರ್ಯಪಾಲಕ ಅಭಿಯಂತರರು, ಕೃ.ಭಾ.ಜ.ನಿ.ನಿ. ಹೊಲಗಾಲುವೆ ವಿಭಾಗ–1 ಔರಾದ ಇವರನ್ನು ಎದುರುದಾರರನ್ನಾಗಿ ಸೇರ್ಪಡೆ ಮಾಡಿ ದೂರು, ತನಿಖಾ ವರದಿ ಇವುಗಳನ್ನು ಕಳುಹಿಸಿ ಆಕ್ಷೇಪಣೆ ಸಲ್ಲಿಸಲು ತಿಳಿಸಲಾಗಿತ್ತು. ಅದರಂತೆ 1ನೇ ಮತ್ತು 2ನೇ ಎದುರುದಾರರಿಗೂ ಸಹ ತನಿಖಾ ವರದಿ ಕಳುಹಿಸಿ ಆಕ್ಷೇಪಣೆಯನ್ನು ಕೇಳಲು ಪತ್ರ ಬರೆಯಲಾಗಿರುತ್ತದೆ.

ಅದರಂತೆ 1ನೇ ಎದುರುದಾರರು ದಿನಾಂಕ:11–04–2022, 2ನೇ ಎದುರುದಾರರು ದಿನಾಂಕ:16–04–2022ರಂದು ಮತ್ತು 3ನೇ ಎದುರುದಾರರು ದಿನಾಂಕ:11–10–2021ರಂದು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

1ನೇ ಎದುರುದಾರರಾದ ಶ್ರೀ ರವೀಂದ್ರ ಬ್ಯಾಕೋಡ, ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು ಇವರು ದಿನಾಂಕ:11–04–2022ರಂದು ಆಕ್ಷೇಪಣೆಯನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಯಲ್ಲಿ ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ (ಸದರಿಯವರು ದಿನಾಂಕ:31–07–2020ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ) ವರದಿಗೆ ಸಂಬಂಧಿಸಿದಂತೆ ಕಳಪೆ ಮಟ್ಟದಿಂದ ಕೂಡಿದೆ ಎಂದು ದೃಡಪಡಿಸುವ ಯಾವುದೇ ದಾಖಲೆ ಮತ್ತು ದಸ್ತಾವೇಜು ಒದಗಿಸಿರುವುದಿಲ್ಲ, ರಸ್ತೆ ಕಾಮಗಾರಿಗೆ ಕಳಪೆ ಮಟ್ಟದ ಸಾಮಗ್ರಿಗಳನ್ನು ಬಳಕೆ ಮಾಡಿರುತ್ತಾರೆಂದು ಹೇಳಿದ ಅಂಶವನ್ನು ರುಜುಪಡಿಸುವ ಸಾಕ್ಷ್ಯ ದಾಖಲೆ ಒದಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿಗೆ ಇಲಾಖೆಯ

ಗುಣನಿಯಂತ್ರಣಾಧಿಕಾರಿಯವರು ಕಾಮಗಾರಿಗಳ ಅಳತೆಗಳಲ್ಲಿ ವ್ಯತ್ಯಾಸದ ಮತ್ತು ಗ್ರೇಡ್-2 ಮೆಟಲ್ ಪರಿಮಾಣ ಕಡಿಮೆ ಇದೆ ಎಂದು ವರದಿ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಗುತ್ತಿಗೆದಾರರಿಗೆ ಹೆಚ್ಚುವರಿ ಸಂದಾಯ ಮಾಡಿದ್ದಲ್ಲಿ ಅಥವಾ ಕಳಪೆ ಕಾಮಗಾರಿ ಎಂದು ನಿರ್ಣಯವಾದಾಗ ಹೆಚ್ಚುವರಿ ಸಂದಯದ ಹಣವನ್ನು ಗುತ್ತಿಗೆದಾರರಿಂದ ದುರಸ್ತಿಗೊಳಿಸುವಂತೆ ಅಥವಾ ಬೇರೊಬ್ಬ ಗುತ್ತಿಗೆದಾರರಿಂದ ಸರಿಪಡಿಸಿಕೊಳ್ಳುವಂತೆ ಬರೆಯಬೇಕಾಗಿತ್ತು ಆದರೆ ಗುತ್ತಿಗೆ ಮತ್ತು ಗುತ್ತಿಗೆದಾರರ ವಿರುದ್ಧ ತೆಗೆದುಕೊಳ್ಳುವ ಕಮದ ಬಗೆ ಬರದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಗ್ರೇಡ್-2 ಜಲ್ಲಿ ಪರಿಮಾಣ ಪ್ರತ್ಯೇಕವಾಗಿ ಗುರುತಿಸಿರುವುದಿಲ್ಲ, ಶೇಕಡಾ 25% ರಲ್ಲಿಯ ಅರ್ಧದಷ್ಟು ಎಂದು ಬರೆದಿರುವುದಕ್ಕೆ ಪೂರಕ ಆದೇಶದ ಪ್ರತಿ, ನಿಯಮ, ನಿರ್ದಿಷ್ಟಪಡಿಸಿದ ವಿಧಿ ವಿಧಾನದ ಉಲ್ಲೇಖ ಇರುವುದಿಲ್ಲವೆಂದು ರೂ.1,98,847/-ಗಳ ಆರ್ಥಿಕ ಹೊಣೆ ನಿಗಧಿಪಡಿಸಲು ಪರಿವೀಕ್ಷಣಾಧಿಕಾರಿಗೆ ಇರುವ ಅಧಿಕಾರ ಉಲ್ಲೇಖಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರ ವರದಿಯು ವೈಜ್ಞಾನಿಕ ಅಂಶಗಳಿಂದ ಕೂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

2ನೇ ಎದುರುದಾರರಾದ ಶ್ರೀ ಸುರೇಶ ಯಾತನೂರ, ಸಹಾಯಕ ಇಂಜಿನಿಯರ್ ಇವರು ದಿನಾಂಕ:16-04-2022ರ ಆಕ್ಷೇಪಣೆಯಲ್ಲಿ ಗ್ರೇಡ್-2 ಮತ್ತು 3 ಐಟಂಗಳನ್ನು ದಪ್ಪಗಳ ಆಧಾರದ ಮೇಲೆ ಅಂದಾಜು ಪತ್ರಿಕೆಯಲ್ಲಿ ಅಳವಡಿಸಿಕೊಂಡಿದ್ದು ನಿಯಮಾನುಸಾರ ದಪ್ಪದ ಆಧಾರದ ಮೇಲೆ ಅಳತೆಗಳನ್ನು ನಮೂದಿಸಿದ್ದು, ಅದರಂತೆ ಬಿಲ್ಲು ಪಾವತಿಯಾಗಿದ್ದು ತೂಕದ ಆಧಾರದ ಮೇಲೆ ಪಾವತಿಸಿರುವುದಿಲ್ಲವೆಂದು, ಗ್ರೇಡ್-2 ಮತ್ತು 3 ಐಟಂಗಳು ಬೇರೆ ಬೇರೆಯಾಗಿದ್ದು ಅವುಗಳ ದರವು ಬೇರೆ ಬೇರೆಯಾಗಿರುತ್ತದೆ. ತನಿಖಾದಿಕಾರಿಯವರು ಸದರಿ ಐಟಂಗಳನ್ನು ಬೇರ್ಪಡಿಸಿ ಅಳತೆಗಳನ್ನು ಪಡೆದಿರುವುದಿಲ್ಲ, ಯಾವ ನಿಯಮಾನುಸಾರ ಲೆಕ್ಕ ಹಾಕಿರುವ ಬಗ್ಗೆ ವಿವರ ನೀಡಿರುವುದಿಲ್ಲ, ಮೆಟಲಿಂಗ್ ಕುರಿತಂತೆ ಮರು ಪರಿಶೀಲನೆ ಕೈಗೊಳ್ಳಲು ಕೋರಿರುತ್ತಾರೆ. ಆಗಸ್ಟ್ 2020ರಲ್ಲಿ ಅತಿವೃಷ್ಟಿ/ಪ್ರವಾಹ ಉಂಟಾಗಿದ್ದು, ನಂತರ 2021-22ನೇ ಸಾಲ್ಲಿನಲ್ಲಿಯೂ ಸಹ ಹೆಚ್ಚು ಮಳೆಯಾಗಿದ್ದು ಎರಡು ವರ್ಷಗಳ ಅತಿವೃಷ್ಟಿಗೆ ತುತ್ತಾಗಿದ್ದರೂ ರಸ್ತೆಯಲ್ಲಿ ಒಂದು ಪಾಟ್ ಹೋಲ್ ಬೀಳದೇ ಇರುವುದು ರಸ್ತೆಯ ಗುಣಮಟ್ಟಕ್ಕೆ ಸಾಕ್ಷಿಯಾಗಿರುತ್ತದೆ ಎಂದು ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ಗುತ್ತಿಗೆದಾರರಿಂದ ವಸೂಲಾತಿ ಮಾಡಲು ಅವಕಾಶವಿದ್ದರೂ ಅಧಿಕಾರಿಗಳಿಂದ ಮೊತ್ತವನ್ನು ವಸೂಲಾತಿ ಮಾಡಬಹುದೆಂದು ಅಭಿಪ್ರಾಯ ಪಟ್ಟಿದ್ದು, ಸಮಂಜಸವಾಗಿರುವುದಿಲ್ಲ, ಒಪ್ಪುವುದಿಲ್ಲವೆಂದು ಒಂದು ವೇಳೆ ವ್ಯತ್ಯಾಸ ಕಂಡುಬಂದಲ್ಲಿ ಟೆಂಡರ್ ಕ್ಲಾಸ್ 2(ಸಿ) ಪ್ರಕಾರ ಸದರಿ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಿ ಮಾಡಬಹುದಾಗಿದೆ ಎಂದು ತಿಳಿಸಿರುತ್ತಾರೆ.

3ನೇ ಎದುರುದಾರರಾದ ಜಗನ್ನಾಥ ಜ್ಯೋತಿರ್ಲಿಂಗ, ಕಾರ್ಯಪಾಲಕ ಅಭಿಯಂತರರು (ನಿವೃತ್ತ) ಇವರು ದಿನಾಂಕ:11-10-2021ರಂದು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಕಳಪೆ ಮಟ್ಟದಿಂದ ಕೂಡಿದೆ

ಎಂದು ದೃಢಪಡಿಸುವ ಯಾವುದೇ ದಾಖಲೆ ಮತ್ತು ದಸ್ತಾವೇಜು ಒದಗಿಸಿರುವುದಿಲ್ಲ, ರಸ್ತೆ ಕಾಮಗಾರಿಗೆ ಕಳಪೆ ಮಟ್ಟದ ಸಾಮಗ್ರಿಗಳನ್ನು ಬಳಕೆ ಮಾಡಿರುತ್ತಾರೆಂದು ಹೇಳಿದ ಅಂಶವನ್ನು ರುಜುಪಡಿಸುವ ಸಾಕ್ಷ್ಯ ದಾಖಲೆ ಒದಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿಗೆ ಇಲಾಖೆಯ ಗುಣನಿಯಂತ್ರಣಾಧಿಕಾರಿಯವರು ಕಾಮಗಾರಿಗಳ ಅಳತೆಗಳಲ್ಲಿ ವ್ಯತ್ಯಾಸದ ಮತ್ತು ಗ್ರೇಡ್-2 ಮೆಟಲ್ ಪರಿಮಾಣ ಕಡಿಮೆ ಇದೆ ಎಂದು ವರದಿ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಗುತ್ತಿಗೆದಾರರಿಗೆ ಹೆಚ್ಚುವರಿ ಸಂದಾಯ ಮಾಡಿದ್ದಲ್ಲಿ ಅಥವಾ ಕಳಪೆ ಕಾಮಗಾರಿ ಎಂದು ನಿರ್ಣಯವಾದಾಗ ಹೆಚ್ಚುವರಿ ಸಂದಯದ ಹಣವನ್ನು ಗುತ್ತಿಗೆದಾರರಿಂದ ದುರಸ್ತಿಗೊಳಿಸುವಂತೆ ಅಥವಾ ಬೇರೊಬ್ಬ ಗುತ್ತಿಗೆದಾರರಿಂದ ಸರಿಪಡಿಸಿಕೊಳ್ಳುವಂತೆ ಬರೆಯಬೇಕಾಗಿತ್ತು ಆದರೆ ಗುತ್ತಿಗೆ ಮತ್ತು ಗುತ್ತಿಗೆದಾರರ ವಿರುದ್ಧ ತೆಗೆದುಕೊಳ್ಳುವ ಕ್ರಮದ ಬಗ್ಗೆ ಬರೆದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಗ್ರೇಡ್-2 ಜಲ್ಲಿ ಪರಿಮಾಣ ಪ್ರತ್ಯೇಕವಾಗಿ ಗುರುತಿಸಿರುವುದಿಲ್ಲ, ಶೇಕಡಾ 25% ರಲ್ಲಿಯ ಅರ್ಧದಷ್ಟು ಎಂದು ಬರೆದಿರುವುದಕ್ಕೆ ಪೂರಕ ಆದೇಶದ ಪ್ರತಿ, ನಿಯಮ, ನಿರ್ದಿಷ್ಟಪಡಿಸಿದ ವಿಧಿ ವಿಧಾನದ ಉಲ್ಲೇಖ ಇರುವುದಿಲ್ಲವೆಂದು ರೂ.1,98,847/-ಗಳ ಆರ್ಥಿಕ ಹೊಣೆ ನಿಗಧಿಪಡಿಸಲು ಪರಿವೀಕ್ಷಣಾಧಿಕಾರಿಗೆ ಇರುವ ಅಧಿಕಾರ ಉಲ್ಲೇಖಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರ ವರದಿಯು ವೈಜ್ಞಾನಿಕ ಅಂಶಗಳಿಂದ ಕೂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ದೂರುದಾರರು ಮಾಡಿರುವ ಆಪಾದನೆಯನ್ನು ಸಂಸ್ಥೆಯ ತಾಂತ್ರಿಕ ವಿಭಾಗ ತನಿಖಾಧಿಕಾರಿ/ಇಂಜಿನಿಯರ್ ಇವರು ತನಿಖೆ ನಡೆಸಿ ಎದುರುದಾರರು ಸದರಿ ರಸ್ತೆ ಕಾಮಗಾರಿಯಲ್ಲಿ ಬಳಸಿರುವ ಗ್ರೇಡ್-2 ಮತ್ತು ಗ್ರೇಡ್-3 ಜಲ್ಲಿಯ ಕಲ್ಲುಗಳನ್ನು ಸ್ಥಳದಲ್ಲಿ ತೆಗೆದು ಅವುಗಳ ತೂಕ, ಡಾಂಬರ್ ಪರಿಮಾಣ, ಸಾಮರ್ಥ್ಯ ಇವುಗಳ ಬಗ್ಗೆ ಪರೀಕ್ಷಾ ವರದಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗುಣಭರವಸೆ ಉಪವಿಭಾಗ, ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರು ಸಲ್ಲಿಸಿದ್ದು ಸದರಿ ವರದಿಗಳು ಸರಿಯಾಗಿದ್ದ ಕಾರಣದಿಂದ ತನಿಖಾಧಿಕಾರಿಯವರು ಎದುರುದಾರರಿಂದ ನಿಯಮಾನುಸಾರ ಹಣವನ್ನು ವಸೂಲು ಮಾಡಲು ತಿಳಿಸಿರುತ್ತಾರೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಹಣವನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲು ತಿಳಿಸಿರುತ್ತಾರೆ. ಗುತ್ತಿಗೆದಾರರಿಂದ ವಸೂಲಿ ಮಾಡುವ ಅಧಿಕಾರವು ಎದುರುದಾರರಿಗೆ ಇರುತ್ತದೆ ಹೊರತು ತನಿಖಾಧಿಕಾರಿಯವರು ಹೊಂದಿರುವುದಿಲ್ಲ. ಎದುರುದಾರರು ತನಿಖಾಧಿಕಾರಿಯವರು ಕೊಟ್ಟಿರುವ ವರದಿಯನ್ನು ಒಪ್ಪಲು ಬರುವುದಿಲ್ಲ ಎಂಬ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

**4. ಒಟ್ಟಾರೆ ಅಭಿಪ್ರಾಯ:**

ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಎದುರುದಾರರು ರಸ್ತೆ ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ಹಾಗೂ ಅಂದಾಜು ಪಟ್ಟಿಯಲ್ಲಿನ ಐಟಂಗಳ ಪ್ರಕಾರ ನಿರ್ವಹಿಸದೇ ಇರುವುದು ಸಾಬೀತಾಗಿದ್ದು ಹಾಗೂ ಸದರಿ ಐಟಂಗಳ ಕಡಿಮೆ ತೂಕದಿಂದ ಹೆಚ್ಚುವರಿಯಾಗಿ ಗುತ್ತಿಗೆದಾರರಿಗೆ ಹಣವನ್ನು ಪಾವತಿಸಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು ಸದರಿ ಹಣವನು, ಎದುರುದಾರರಿಂದ ವಸೂಲಿ ಮಾಡುವುದು ಕ್ರಮಬದ್ಧವಾಗಿರುವುದರಿಂದ ಎದುರುದಾರರ ವಿರುದ್ಧ ದೂರುದಾರರು ಮಾಡಿರುವ ಆಪಾದನೆಯು ಸಾಬೀತಾಗಿರುತ್ತದೆ.

ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರಾದ 1) ರವೀಂದ್ರ ಬೈಕೊಡ್, ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ, ಔರಾದ್, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ (ನಿವೃತ್ತಿ ದಿನಾಂಕ:31-07-2020) 2) ಸುರೇಶ್, ಪ್ರಭಾರ ಎಇಇ, ಕೆ.ಬಿ.ಜೆ.ಎನ್.ಎನ್., ಕಾಡಾ ಹೊರಗಾಲುವೆ ಉಪವಿಭಾಗ, ನಂ.2, ಚಿಗರಹಳ್ಳಿ ಕ್ಯಾಂಪ್, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ (ನಿವೃತ್ತಿ ದಿನಾಂಕ:31-01-2045) ಮತ್ತು 3) ಜಗನ್ನಾಥ ಜ್ಯೋತಿರ್ಲಿಂಗ, ಹಿಂದಿನ ಪ್ರಭಾರ ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ-1, ಔರಾದ್, ಜೇವರ್ಗಿ ತಾಲ್ಲೂಕು, ಕಲಬುರಗಿ ಇವರ (ನಿವೃತ್ತಿ ದಿನಾಂಕ:31-10-2019) ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ ಹಾಗೂ 1ನೇ ಮತ್ತು 3ನೇ ಎದುರುದಾರರಾದ 1) ರವೀಂದ್ರ ಬೈಕೊಡ್, ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ, ಔರಾದ್, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ದಿನಾಂಕ:ದಿನಾಂಕ:31-07-2020ರಂದು ಮತ್ತು 2) ಜಗನ್ನಾಥ ಜ್ಯೋತಿರ್ಲಿಂಗ, ಹಿಂದಿನ ಪ್ರಭಾರ ಇಇ, ಕೆ.ಬಿ.ಜೆ.ಎನ್.ಎಲ್., ಕಾಡಾ ವಿಭಾಗ-1, ಔರಾದ್, ಜೇವರ್ಗಿ ತಾಲ್ಲೂಕು, ಕಲಬುರಗಿ ಇವರ ದಿನಾಂಕ:30-10-2021ರಂದು ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ನಿಯಮ 214(2) (ಬಿ) (ii) ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-1 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

06/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.



10